INSTITUTION'S INNOVATION COUNCIL
(Ministry of HRD Initiative)

Bapuji Educational Association (R.)

# Bapuji Institute of Engineering and Technology

**Davangere-577004, Karnataka**

*Invitation*

# NIRMANA 3.0

## In-house Project Exhibition

**Chief Guest** : **Er. D S Chandrashekar**
Industrialist and Vice President
The Institute of Indian Foundrymen(IIF), Kolkata

**Guest of Honor** : **Prof. Y Vrushabhendrappa**
Director, BIET, Davanagere

**President** : **Dr. H B Aravind**
Principal, BIET, Davanagere

**Convener** : **Dr. A G Shankara Murthy**
Professor, Dean R & D
BIET, Davangere

*On Monday, 29th May 2023, 11.00 a.m.*
*at S S Mallikarjun Cultural Centre, BIET.*

*All are Cordially Invited*

Janathavani 28-05-2023

## ಬಿಐಇಟಿಯಲ್ಲಿ ನಾಳೆ ಯೋಜನಾ

# ವಸ್ತು ಪ್ರದರ್ಶನ-ನಿರ್ಮಾಣ 3.0

ದಾವಣಗೆರೆ, ಮೇ 27 - ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಅಂತಿಮ ವರ್ಷದ ಬಿಇ ವಿದ್ಯಾರ್ಥಿಗಳ ಯೋಜನಾ ವಸ್ತು ಪ್ರದರ್ಶನ – ನಿರ್ಮಾಣ 3.0 ಕಾರ್ಯಾಗಾರವನ್ನು ನಾಡಿದ್ದು ದಿನಾಂಕ 29ರ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಹಿರಿಯ ವಿದ್ಯಾರ್ಥಿ ಹಾಗೂ ಶಿವಮೊಗ್ಗದ ಕೈಗಾರಿಕೋದ್ಯಮಿ ಮತ್ತು ಕೊಲ್ಕೊತ್ತದ ಇನ್ಸ್ಟಿಟ್ಯೂಟ್ ಇಂಡಿಯನ್ ಫೌಂಡ್ರಿಮೆನ್ ಸಂಸ್ಥೆಯ ಉಪಾಧ್ಯಕ್ಷ ಇಂಜಿನಿಯರ್ ಡಿ.ಎಸ್.ಚಂದ್ರಶೇಖರ್ ನೆರವೇರಿಸಲಿದ್ದಾರೆ. ಪ್ರಾಂಶುಪಾಲ ಡಾ. ಎಚ್.ಬಿ.ಅರವಿಂದ್, ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ ಇತರರು ಉಪಸ್ಥಿತರಿರಲಿದ್ದಾರೆಂದು ಕಾರ್ಯಾಗಾರದ ಆಯೋಜಕರಾದ ಕಾಲೇಜಿನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ನಿಕಾಯರಾದ ಡಾ ಎ.ಜಿ.ಶಂಕರಮೂರ್ತಿ ತಿಳಿಸಿದ್ದಾರೆ.

# ಬಿಐಇಟಿಯಲ್ಲಿ ‘ನಿರ್ಮಾಣ 3.0’ ಕಾರ್ಯಾಗಾರ ಇಂದು

Prajavani 28-05-2023

ದಾವಣಗೆರೆ: ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ 2022-23ನೇ ಸಾಲಿನ ಅಂತಿಮ ವರ್ಷದ ಬಿ.ಇ. ವಿದ್ಯಾರ್ಥಿಗಳ ಯೋಜನಾ ವಸ್ತು ಪ್ರದರ್ಶನ, ‘ನಿರ್ಮಾಣ 3.0’ ಕಾರ್ಯಾಗಾರವನ್ನು ಮೇ 29ರಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ ಮತ್ತು ಭಾರತೀಯ ಎಂಜಿನಿಯರ್ಸ್ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಂಶೋಧನೆಗಳನ್ನು ಪ್ರದರ್ಶಿಸುವರು ಎಂದು ಕಾಲೇಜಿನ ಸಂಶೋಧನೆ ಮತ್ತು ಅಭಿವೃದ್ಧಿ ನಿಕಾಯದ ಡಾ. ಎ.ಜಿ.ಶಂಕರಮೂರ್ತಿ ತಿಳಿಸಿದ್ದಾರೆ. ಕೊಲ್ಕೊತ್ತದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಫೌಂಡ್ರಿಮೆನ್ ಸಂಸ್ಥೆ ಉಪಾಧ್ಯಕ್ಷ ಡಿ.ಎಸ್. ಚಂದ್ರಶೇಖರ್ ಉದ್ಘಾಟಿಸುವರು. ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೃಷಭೇಂದ್ರಪ್ಪ ಭಾಗವಹಿಸುವರು.

## ಬಿಐಇಟಿ.ಯಲ್ಲಿ 'ನಿರ್ಮಾಣ್ 3.0' ಪ್ರದರ್ಶನ

nagaravani 30-05-2023

# ತಾಂತ್ರಿಕತೆ ಬದಲಾದಂತೆ ಉಪಯೋಗದ ವಿಧಾನವೂ ಬದಲಾಗುತ್ತದೆ-ಡಾ|| ಅರವಿಂದ್



ದಾ.ನಗರವಾಣಿ ಸುದ್ದಿ

ದಾವಣಗೆರೆ. ಮೇ.29; ಪ್ರಸ್ತುತ ತಾಂತ್ರಿಕತೆ ಬದಲಾದಂತೆ ಅದರ ಕಲಿಕೆ ಮತ್ತು ಉಪಯೋಗದ ಕಡೆಗೆ ಹೆಚ್ಚು ಗಮನ ಹರಿಸುವುದು ಅಗತ್ಯವಾಗಿದೆ ಎಂದು ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಹೇಳಿದರು.

ಸೋಮವಾರ ನಗರದ ಬಿಐಇಟಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ನಿರ್ಮಾಣ್ 3.0 ಪ್ರದರ್ಶನದಲ್ಲಿ ಮಾತನಾಡಿದ ಅವರು, ಸಿವಿಲ್, ಕಂಪ್ಯೂಟರ್, ಬಯೋಟೆಕ್ನಾಲಜಿ ಹೀಗೆ ಎಲ್ಲ ವಿಭಾಗಗಳು ಒಂದಕ್ಕೊಂದು ಸೇರಿಸಿಕೊಂಡು ಇಡೀ ತಾಂತ್ರಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ನಮ್ಮ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿವರ್ಷ ಈ ರೀತಿಯ ಪ್ರದರ್ಶನ ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ 52 ವಿಶೇಷ ಪ್ರಾಜೆಕ್ಟ್ ಗಳನ್ನು ಕಾಲೇಜಿನ ವಿದ್ಯಾರ್ಥಿಗಳು ತಯಾರಿಸಿದ್ದು, ಒಂದಕ್ಕಿಂತ ಒಂದು ಭಿನ್ನವಾಗಿವೆ ಎಂದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡಲಾಗಿದೆ. ಎನ್‌ವಿರೋನ್ಮೆಂಟ್ ಇಂಜಿನಿಯರಿಂಗ್‌ನಲ್ಲಿ ಕೆಮಿಕಲ್, ಸಿವಿಲ್ ಮತ್ತು ಮೆಕ್ಯಾನಿಕಲ್ ಇದರೊಂದಿಗೆ ಕೃತಕ ಬುದ್ದಿ ಮತ್ತೆ ಕೂಡ ಅಗತ್ಯವಾಗಿದೆ. ಪ್ರಸ್ತುತ ದಿನಗಳಲ್ಲಿ ತಾಂತ್ರಿಕತೆ ಬದಲಾದಂತೆ ಅದಕ್ಕೆ ನಾವು ಹೊಂದಿಕೊಳ್ಳಬೇಕು. ಮೆಕ್ಯಾನಿಕಲ್ ಇಂಜಿನಿಯರಿಂಗ್, ಮತ್ತು ಸಿವಿಲ್ ಇಂಜಿನಿಯರಿಂಗ್ ಹೀಗೆ ಎರಡೂ ವಿಭಾಗಕ್ಕೂ ಕಂಪ್ಯೂಟರ್ ಇಂಜಿನಿಯರಿಂಗ್ ಅಗತ್ಯವಾಗಿದೆ. ಹೀಗೆ ಒಂದಕ್ಕೊಂದು ಬೆಸೆದುಕೊಂಡಿವೆ ಎಂದು ಹೇಳಿದರು.

ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಶಿವಮೊಗ್ಗದ ಹೆಸರಾಂತ ಉದ್ಯಮಿ ಡಿ.ಎಸ್. ಚಂದ್ರಶೇಖರ್ ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ಕಳೆದ ದಶಕಗಳ ಪ್ರಾಜೆಕ್ಟ್‌ಗಳಿಗೂ ಇಂದಿನ ಪ್ರಾಜೆಕ್ಟ್ ಗಳಿಗೂ [illegible] ಬದಲಾವಣೆಗಳಾಗಿವೆ. ಇಂದಿನ ಪ್ರದರ್ಶನದಲ್ಲಿ ಹೆಚ್ಚಾಗಿ ರೈತರಿಗೆ ಅನುಕೂಲವಾಗುವ ಪ್ರಾಜೆಕ್ಟ್ ಗಳಿರುವುದು ಗಮನಾರ್ಹ. ಡಿಜಿಟಲೈಸೇಷನ್ ಮೂಲಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕೆಲಸ ಮಾಡುತ್ತಿದ್ದಾರೆ. ಇಂದಿನ ಯೋಜನೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಅದ-ರಿಂದ ಸಮಾಜಕ್ಕೆ ಅನುಕೂಲ ಮಾಡುವುದು ಎಲ್ಲರ ಆಶಯವಾಗಿದೆ.ಪರಿಸರ ಉಳಿಸುವುದು, ಅಸಹಾಯಕರಿಗೆ ಅನುಕೂಲವಾಗುವ ಕೆಲವು ಪ್ರಾಜೆಕ್ಟಗಳನ್ನು ವಿದ್ಯಾತಿಗಳು ಆವಿಷ್ಕರಿಸುವುದು ಸಂತೋಷದ ವಿಚಾರ. ಈ ಪ್ರಾಜೆಕ್ಟ್‌ಗಳನ್ನು ನಾವೂ ಕೂಡ ನಮ್ಮ ಉದ್ಯಮದಲ್ಲಿ ಅಳವಡಿಸಿಕೊಳ್ಳುವ ಚಿಂತನೆ ಮಾಡಿರುವುದಾಗಿ ತಿಳಿಸಿದರು.

ಕಾಲೇಜಿನ ಆರ್ ಅಂಡ್ ಡೀನ್ ವಿಭಾಗದ ಮುಖ್ಯಸ್ಥ ಶಂಕರ ಮೂರ್ತಿ ಮಾತನಾಡಿ, 52 ಪ್ರಾಜೆಕ್ಟ್‌ಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳನ್ನು ಹೊರತರುವುದು ಇದರ ಉದ್ದೇಶವಾಗಿದೆ. ಉತ್ತಮ ಸಂಶೋಧನೆಗಳಿಗೆ ಪೇಟೆಂಟ್ ಪಡೆದು

(3ನೇ ಪುಟಕ್ಕೆ)

# ಬಿಐಇಟಿ.ಯಲ್ಲಿ 'ನಿರ್ಮಾಣ್'...

Nagaravani 30-05-2023

(1ನೇ ಪುಟದಿಂದ) ಕೈಗಾರಿಕೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಸಮಾಜಕ್ಕೆ ಪೂರಕವಾಗುವಂತೆ ಮಾಡಲಾಗುವುದು ಎಂದು ಹೇಳಿದರು. ಮರುಭೂಮಿಯ ಮಣ್ಣನ್ನು ಫಲವತ್ತಾದ ಭೂಮಿಯನ್ನಾಗಿ ಮಾಡುವುದು, ಅಂಧರ ಓಡಾಟಕ್ಕೆ ಅನುಕೂಲವಾಗುವಂತೆ ಚಾರ್ಜೆಬಲ್ ಶೂಗಳು, ಕೋಳಿಮೊಟ್ಟೆಯ ಹೊರಭಾಗದ ಗಟ್ಟಿಯಾದ ಭಾಗವನ್ನು ಬಳಸಿ ವಿಟಮಿನ್ ಮಾತ್ರೆ ತಯಾರಿಸಿರುವುದು, ಸೆನ್ಸಾರ್ ಆಧಾರಿತ ಕೃಷಿ ಸಹಕಾರಿ ಬೋರ್ಡ್ ನಿರ್ಮಾಣ ಇಂಥಹ ಹತ್ತು ಹಲವಾರು ಸಂಶೋಧನೆಗಳು ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಿರ್ಮಾಣ 3.0 ಕಾರ್ಯಾಗಾರದಲ್ಲಿ 50ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳ ಪ್ರದರ್ಶನ

# ಬಿಐಇಟಿ: ವಿದ್ಯಾರ್ಥಿಗಳ ಅನ್ವೇಷಣೆ ಅನಾವರಣ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮರುಭೂಮಿಯ ಮಣ್ಣನ್ನೇ ಫಲವತ್ತಾಗಿ ಮಾಡಿ ಬೆಳೆ ಬೆಳೆದರೆ ಹೇಗಿರುತ್ತೇ? ಕೋಳಿ ಮೊಟ್ಟೆಯ ಸಿಪ್ಪೆಯಿಂದ ವಿಟಮಿನ್ ಮಾತ್ರೆ ತಯಾರು.. ರೋಬೋಟ್ ಬಳಸಿ ಅಗ್ನಿ ಅನಾಹುತ ತಡೆಯುವುದು.. ಮನೆಯಲ್ಲೇ ಕುಳಿತು ರೈತರು ಜಮೀನಿಗೆ ನೀರುಣಿಸಿದರೆ ಚಂದ ಅಲ್ಲವೇ?

–ಇವು ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದ 2022-23ನೇ ಸಾಲಿನ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಯೋಜನಾ ವಸ್ತು ಪ್ರದರ್ಶನ-ನಿರ್ಮಾಣ 3.0 ಕಾರ್ಯಾಗಾರದಲ್ಲಿ ಕಂಡುಬಂದ ದೃಶ್ಯಗಳು.



ದಾವಣಗೆರೆಯ ಬಾಪೂಜಿ ಎಂಜಿನಿಯರಿಂಗ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ನಿರ್ಮಾಣ– 3.0 ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳ ಸಂಶೋಧನಾ ಮಾದರಿಗಳನ್ನು ಗಣ್ಯರು ವೀಕ್ಷಿಸಿದರು.

ಎಲೆಕ್ಟ್ರಾನಿಕ್ ಅಂಡ್ ಕಮ್ಯುನಿಕೇಷನ್ ವಿಭಾಗದ ವಿದ್ಯಾರ್ಥಿಗಳು ಪ್ರದರ್ಶಿಸಿದ ಸಂಶೋಧನಾ ಪ್ರಾಜೆಕ್ಟ್‌ಗಳು ಗಮನ ಸೆಳೆದವು.

ಕೃಷಿಗಾಗಿ ಇಎಸ್‌ಪಿ 32 ಮೈಕ್ರೋ ಕಂಟ್ರೋಲರ್ ಮತ್ತು 'ಲೋರಾ' ಆಧಾರಿತ ಪ್ರಾಜೆಕ್ಟ್ ಮೂಲಕ ರೈತರು ಮನೆಯಲ್ಲೇ ಕುಳಿತು ಜಮೀನಿಗೆ ನೀರುಣಿಸುವ ಸುಲಭ ವಿಧಾನವನ್ನು ಕಂಡುಹಿಡಿದಿದ್ದಾರೆ. ಇವರ ಪ್ರಕಾರ 5 ಕಿ.ಮೀ. ವ್ಯಾಪ್ತಿಯಲ್ಲಿ ಜಮೀನು ಇದ್ದರೆ ಮನೆಯಲ್ಲೇ ಕುಳಿತು ಜಮೀನಿನ ತೇವಾಂಶ, ಬೆಳೆಗಳ ಸ್ಥಿತಿಗತಿಯನ್ನು ತಿಳಿಯಬಹುದು.

'ವೈಫೈ, ಬ್ಲೂಟೂತ್ ಸಂವಹನ ಕಲ್ಪಿಸಲಿದ್ದು, ಮೈಕ್ರೊ ಕಂಟ್ರೋಲರ್ ಚಿಪ್ ಮತ್ತು ಆಂಟೇನಾಗಳು ಮಾಹಿತಿ ಸ್ವೀಕರಿಸಿ ಪರದೆಯ ಮೇಲೆ ಅದನ್ನು ವೀಕ್ಷಿಸಬಹುದು. ರೈತರು ರಾತ್ರಿಯ ವೇಳೆ ಜಮೀನಿಗೆ ಹಾವು ಕಚ್ಚಿ ಮೃತಪಡುತ್ತಿದ್ದು, ಈ ತಂತ್ರಜ್ಞಾನ ಬಳಸಿಕೊಂಡರೆ ಅನಾಹುತ ತಪ್ಪಿಸಬಹುದು' ಎಂದು ಮಾರ್ಗದರ್ಶಕರಾದ ಗಣೇಶ್ ಮಾಹಿತಿ ನೀಡಿದರು.

ಮೊಟ್ಟೆಯ ಮೇಲ್ಪದರದ ಬಿಳಿಭಾಗವನ್ನು ಪುಡಿ ಮಾಡಿ, ಅದೇ ಪುಡಿಯನ್ನು ಕ್ಯಾಲ್ಸಿಯಂ ಮಾತ್ರೆಗಳಾಗಿ ಪರಿವರ್ತಿಸಿ ಸಸ್ಯಗಳಿಗೆ ಹಾಕಬಹುದು. ಸಸ್ಯಗಳ ಬೆಳವಣಿಗೆಗೆ ಸಹಾಯವಾಗುವ ಮಾದರಿಯನ್ನು ಪ್ರದರ್ಶಿಸಿದರು.

'ಸಸಿಗಳ ಬೆಳವಣಿಗೆಗೆ ಪ್ರೊಟೀನ್ ಅಗತ್ಯವಾಗಿದ್ದು, ಬೆಳವಣಿಗೆಯ ಹಂತದಲ್ಲಿ ಈ ಪೌಡರ್ ಅನ್ನು ಮಣ್ಣಿಗೆ ಹಾಕಿದರೆ ಬೆಳೆ ಹುಲುಸಾಗಿ ಬರುತ್ತದೆ' ಎಂದು ವಿದ್ಯಾರ್ಥಿಗಳು ವಿವರಿಸಿದರು.


ಮರಳುಗಾಡಿನ ಮಣ್ಣಿನಲ್ಲಿ 'ನ್ಯಾನೋ ಕ್ಲೇ' ತಂತ್ರಜ್ಞಾನ ಬಳಸಿ ಬೆಳೆ ತೆಗೆಯಬಹುದಾದ ಪ್ರಾಜೆಕ್ಟ್ ಅನ್ನು ಪ್ರದರ್ಶಿಸಿದ್ದು ವಿಶೇಷ. 'ಈ ತಂತ್ರಜ್ಞಾನ ಬಳಸಿದರ ಸಸ್ಯಗಳಿಗ ರೋಗ ನಿರೋಧಕ, ಪೌಷ್ಠಿಕಾಂಶ ಹೆಚ್ಚುತ್ತದೆ. ಯಾವುದೇ ಕೀಟನಾಶಕ ಬಳಸಬೇಕಿಲ್ಲ' ಎಂದು ಮಾರ್ಗದರ್ಶಕ ಶರಣ್ ತಿಳಿಸಿದರು.

'ಪ್ರಸ್ತುತ ತಾಂತ್ರಿಕತೆ ಬದಲಾದಂತೆ ಅದರ ಕಲಿಕೆ ಮತ್ತು ಉಪಯೋಗದ ಕಡೆಗೆ ಹೆಚ್ಚು ಗಮನಹರಿಸುವುದು ಅಗತ್ಯ. ಸಿವಿಲ್, ಕಂಪ್ಯೂಟರ್, ಬಯೋಟೆಕ್ನಾಲಜಿ ಹೀಗೆ ಎಲ್ಲ ವಿಭಾಗಗಳು ಒಂದಕ್ಕೊಂದು ಸೇರಿಸಿಕೊಂಡು ತಾಂತ್ರಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ನಮ್ಮ ಆದ್ಯತೆ. ಈ ವರ್ಷ 52 ವಿಶೇಷ ಪ್ರಾಜೆಕ್ಟ್‌ಗಳನ್ನು ವಿದ್ಯಾರ್ಥಿಗಳು ತಯಾರಿಸಿದ್ದು, ಒಂದಕ್ಕಿಂತ ಒಂದು ಭಿನ್ನವಾಗಿವೆ' ಎಂದು ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಅರವಿಂದ್ ಹೇಳಿದರು.

'ರೈತರಿಗೆ ಅನುಕೂಲವಾಗುವ ಹಲವು ಮಾದರಿಗಳು ಇಲ್ಲಿದ್ದು, ಡಿಜಿಟಲೈಸೇಷನ್ ಮೂಲಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕೆಲಸ ಮಾಡುತ್ತಿದ್ದಾರೆ. ಇಂದಿನ ಯೋಜನೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಅದರಿಂದ ಸಮಾಜಕ್ಕೆ ಅನುಕೂಲ ಮಾಡುವುದು ಎಲ್ಲರ ಆಶಯವಾಗಿದೆ. ಈ ಪ್ರಾಜೆಕ್ಟ್‌ಗಳನ್ನು ನಾವೂ ಉದ್ಯಮದಲ್ಲಿ ಅಳವಡಿಸಿಕೊಳ್ಳುವ ಚಿಂತನೆ ಇದೆ' ಎಂದು ಕಾರ್ಯಕ್ರಮ ಉದ್ಘಾಟಿಸಿದ ಶಿವಮೊಗ್ಗದ ಕೈಗಾರಿಕೋದ್ಯಮಿ ಡಿ.ಎಸ್. ಚಂದ್ರಶೇಖರ್ ಹೇಳಿದರು.

ಕಾಲೇಜಿನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ನಿರ್ದೇಶಕ ಡಾ. ಎ.ಜಿ. ಶಂಕರಮೂರ್ತಿ, ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಇದ್ದರು.

## ಅಂಧರಿಗೆ ಮಾರ್ಗದರ್ಶಕ ಈ ಶೂ



ಅಂಧರಿಗೆ ಅನುಕೂಲವಾಗುವಂತೆ ಸೆನ್ಸರ್ ಆಧಾರಿತ ಶೂ ಎಲ್ಲರ ಗಮನ ಸೆಳೆಯಿತು. ಅಂಧರು ದಾರಿಯಲ್ಲಿ ನಡೆಯುವಾಗ ಒಂದು ಕೋಲಿನ ಮೂಲಕ ಏನಿದೆ ಎಂಬುದನ್ನು ಪತ್ತೆಹಚ್ಚುತ್ತಾರೆ. ಅದರಂತೆ ಈ ಶೂ ಧರಿಸಿ ಹೋಗುವಾಗ ಅವರಿಗೆ ಮುಂದೆ ಏನಿದೆ ಎಂಬುದು ಗೊತ್ತಾಗುತ್ತದೆ.

ಶೂಗೆ ಸೆನ್ಸರ್ ಅಳವಡಿಸಿದ್ದು, ನಡೆಯುವಾಗ ಮುಂದೆ ಏನಾದರೂ ಚಲಿಸಿದರೆ ಸೆನ್ಸರ್ ಪತ್ತೆ ಹಚ್ಚಿ ಬ್ಲೂಟೂತ್ ಮೂಲಕ ಇಯರ್‌ಫೋನ್‌ಗೆ ಶಬ್ದ ಗೊತ್ತಾಗುತ್ತದೆ. ಕಿವುಡರಿಗೆ ವೈಬ್ರೇಷನ್ ಮೂಲಕ ಮುಂದೆ ಏನು ಚಲಿಸುತ್ತಿದೆ ಎಂಬುದು ತಿಳಿಯುತ್ತದೆ.


**TUNGABHADRA BOARD : TB DAM**

e-Procurement Short Term Tender Notice IFB Nos.07/2023-24 to 42/2023-24 Dt.29.05.2023

Tender for total 36 Nos. of Works in respect of HW & HLC Division, TB Dam and LLC Division, Ballari under works categories are invited through 'e-Procurement'

| | | |
|---|---|---|
| Bid Document downloading Start | : | 30.05.2023 at 11.00 AM |

# ಬಿಐಇಟಿ 56 ಪ್ರಾಜೆಕ್ಟ್‌ಗಳ ಪ್ರದರ್ಶನ

■ **ವಿಕ ಸುದ್ದಿಲೋಕ** ದಾವಣಗೆರೆ Vijayakarnataka 30-05-2023

ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಎಂಜಿನಿಯರಿಂಗ್ ಕ್ಷೇತ್ರದ ಅತ್ಯಾಧುನಿಕ ಸಂಶೋಧನೆಗಳ ಮಹಾ ಜಾತ್ರೆಯೇ ತೆರೆದುಕೊಂಡಿತ್ತು. ಇಂದಿನ ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ರೂಪಿಸಿದ್ದ ಪ್ರಾತ್ಯಕ್ಷಿಕೆಗಳು ಬಿಐಇಟಿ ನಿರ್ಮಾಣ 3.0 ಮೂಲಕ ಅನಾವರಣಗೊಂಡವು.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಹಾಗೂ ಬಿಐಇಟಿ ಸಂಸ್ಥೆಯಿಂದ ಹಣಕಾಸು ನೆರವು ಪಡೆದು ಕಾಲೇಜಿನ ಎಲ್ಲ 10 ವಿಭಾಗಗಳ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ 56 ನೂತನ ಪ್ರಾಜೆಕ್ಟ್‌ಗಳು ಕಾಲೇಜು ಆವರಣದಲ್ಲಿ ಪ್ರದರ್ಶನಗೊಂಡವು. ಈ ಬಾರಿ ಅಂಧರು ನಡೆದಾಡುವಾಗ ಬಳಸುವ ಕೋಲಿಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶ ನೀಡಿ ಸೆನ್ಸಾರ್ ವ್ಯವಸ್ಥೆ ಮಾಡಿರುವುದು ಸೇರಿ ಹಲವು ಪ್ರಾತ್ಯಕ್ಷಿಕೆಗಳು ಗಮನ ಸೆಳೆದವು.

ಬಿಐಇಟಿ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಸ್ಥ ಡಾ.ಎ.ಜಿ. ಶಂಕರಮೂರ್ತಿ ಮಾತನಾಡಿ, ಪ್ರದರ್ಶನಗೊಂಡಿರುವ ಯೋಜನೆಗಳಿಗೆ ಮೂರು ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಪ್ರಾತ್ಯಕ್ಷಿಕೆಗಳಲ್ಲಿ ಅತ್ಯುತ್ತಮವಾಗಿರುವುದನ್ನು ಆಯ್ಕೆ ಮಾಡಿ ಪ್ರತಿ ವಿಭಾಗಕ್ಕೆ ಒಂದರಂತೆ ಬೆಸ್ಟ್ ಪ್ರಾಜೆಕ್ಟ್ ಆಫ್ ದ ಡಿಪಾರ್ಟ್‌ಮೆಂಟ್ ಪ್ರಶಸ್ತಿ ನೀಡಲಾಗುವುದು. ಇದರೊಂದಿಗೆ ಬೆಸ್ಟ್ ಇನ್ನೋವೇಟಿವ್ ಪ್ರಾಜೆಕ್ಟ್ ಆಫ್ ದ ಇನ್‌ಸ್ಟಿಟ್ಯೂಟ್, ಬೆಸ್ಟ್ ಸೋಷಿಯಲ್ ಅವೇರ್ನೆಸ್ ಪ್ರಾಜೆಕ್ಟ್ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಕೋಲ್ಕತ್ತಾದ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಫೌಂಡ್ರಿಮನ್ ಉಪಾಧ್ಯಕ್ಷ ಡಿ.ಎಸ್. ಚಂದ್ರಶೇಖರ್ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಸಮಾರಂಭದಲ್ಲಿ ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್, ಎಲ್ಲ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ನಡೆದ ನಿರ್ಮಾಣ 3.0 ವಸ್ತು ಪ್ರದರ್ಶನಲ್ಲಿ ವಿದ್ಯಾರ್ತಿಗಳು ರೂಪಿಸಿದ ಪ್ರಾತ್ಯಕ್ಷಿಕೆಗಳನ್ನು ಡಿ.ಎಸ್. ಚಂದ್ರಶೇಖರ್ ವೀಕ್ಷಿಸಿದರು.

Kannada Prabha 30-05-2023

# ತಾಂತ್ರಿಕತೆ ಬದಲಿಗೆ ನಾವೂ ಹೊಂದಕೊಳ್ಳಬೇಕಿದೆ

## ನಿರ್ಮಾಣ 3.0 ಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್ ಸಲಹೆ

• ಕನ್ನಡಪ್ರಭ ವಾರ್ತೆ ದಾವಣಗೆರೆ

ಹೊಸರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಕೌಶಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುವ ಬೆನ್ನಲ್ಲೇ ಆಧುನಿಕ ಜಗತ್ತಿನಲ್ಲಿ ತಾಂತ್ರಿಕತೆ ಬದಲಾದಂತೆಲ್ಲಾ ಅದರ ಕಲಿಕೆ, ಉಪಯೋಗದ ಕಡೆಗೂ ವಿದ್ಯಾರ್ಥಿ, ಯುವಜನರು ಗಮನ ಹರಿಸಬೇಕಿದೆ ಎಂದು ಬಾಪೂಜಿ ತಾಂತ್ರಿಕ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್ ಕಿವಿಮಾತು ಹೇಳಿದರು.

ನಗರದ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಿರ್ಮಾಣ 3.0 ಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಸಿವಿಲ್, ಕಂಪ್ಯೂಟರ್, ಬಯೋ ಟೆಕ್ನಾಲಜಿ ಹೀಗೆ ಎಲ್ಲಾ ವಿಭಾಗಗಳನ್ನು ಒಂದಕ್ಕೊಂದು ಸೇರಿಸಿ, ಇಡೀ ತಾಂತ್ರಿಕ ಕ್ಷೇತ್ರ ಅಭಿವೃದ್ಧಿಪಡಿಸುವುದು ನಮ್ಮ ಆದ್ಯತೆ. ಪ್ರತಿ ವರ್ಷವೂ ತಾಂತ್ರಿಕ ಪ್ರದರ್ಶನವನ್ನು ಕಾಲೇಜಿನಿಂದ ಏರ್ಪಡಿಸುವ ಮೂಲಕ ಹೊಸ ಆಲೋಚನೆ, ಹೊಸ ಆವಿಷ್ಕಾರ, ಹೊಸ ಪ್ರಯತ್ನ, ನವೀನ ಚಿಂತನೆಗಳಿಗೆ ನೀರೆರೆದು, ಪ್ರೋತ್ಸಾಹಿಸುವ ಕೆಲಸವಾಗುತ್ತಿದೆ. ಪ್ರಸಕ್ತ ಸಾಲಿನ ನಿರ್ಮಾಣ 3.0 ಪ್ರದರ್ಶನದಲ್ಲಿ 52 ವಿಶೇಷ ಪ್ರಾಜೆಕ್ಟ್‌ಗಳನ್ನು ನಮ್ಮ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರ ತಂಡ ರೂಪಿಸಿದೆ. ಒಂದೊಂದು ಮಾದರಿಯೂ ಭಿನ್ನ ವಿಭಿನ್ನವಾಗಿದ್ದು, ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆ, ಹೊಸ ಆಲೋಚನೆ, ಆವಿಷ್ಕಾರಗಳಿಗೆ ಮುನ್ನುಡಿ ಬರೆಯುವಂತಿವೆ ಎಂದು ತಿಳಿಸಿದರು.

ಎಂದು ಡಾ.ಅರವಿಂದ್ ವಿವರಿಸಿದರು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ನಿರ್ಮಾಣ 3.0 ಪ್ರದರ್ಶನ ಉದ್ಘಾಟಿಸಿ ವಿವಿಧ ಮಾದರಿ, ಸಂಶೋಧನೆಗಳನ್ನು ವೀಕ್ಷಿಸಿದ ಹಳೆಯ ವಿದ್ಯಾರ್ಥಿ, ಶಿವಮೊಗ್ಗದ ಉದ್ಯಮಿ ಡಿ.ಎಸ್.ಚಂದ್ರಶೇಖರ, ಡಾ. ಎಚ್.ಬಿ.ಅರವಿಂದ್, ಪ್ರೊ.ವೈ.ವೃಷಭೇಂದ್ರಪ್ಪ ಇತರರಿದ್ದರು.

ಪ್ರದರ್ಶನ ಉದ್ಘಾಟಿಸಿದ ಕಾಲೇಜಿನ ಹಳೆಯ ವಿದ್ಯಾರ್ಥಿ, ಶಿವಮೊಗ್ಗದ ಉದ್ಯಮಿ ಡಿ.ಎಸ್. ಚಂದ್ರಶೇಖರ ಮಾತನಾಡಿ, ಹತ್ತು ವರ್ಷಗಳ ಹಿಂದಿನ ಪ್ರಾಜೆಕ್ಟ್‌ಗಳಿಗೂ, ಈಗಿನ ಪ್ರಾಜೆಕ್ಟ್‌ಗಳಿಗೂ ಸಾಕಷ್ಟು ಬದಲಾವಣೆ ಕಾಣಬಹುದು. ಈಗಿನ ಪ್ರದರ್ಶನದಲ್ಲಿ ಕೃಷಿಗೆ ಪೂರಕವಾಗುವ, ರೈತರಿಗೆ ಅನುಕೂಲವಾಗುವಂತಹ ಮಾದರಿಗಳನ್ನು ವಿದ್ಯಾರ್ಥಿಗಳು ಸಿದ್ಧಪಡಿಸಿರುವುದು ಸ್ವಾಗತಾರ್ಹ. ಡಿಜಿಟಲೈಸೇಷನ್ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕೆಲಸ ಮಾಡುತ್ತಿದ್ದು, ಇದು ಇಂದಿನ ಅಗತ್ಯತೆಯೂ ಆಗಿದೆ ಎಂದರು.

ಪ್ರಸ್ತುತ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಮಾದರಿಗಳಲ್ಲಿ ಮತ್ತಷ್ಟು ಗಮನಾರ್ಹ ಬದಲಾವಣೆಯನ್ನು ಮಾಡುವ ಮೂಲಕ ಮತ್ತಷ್ಟು ಸುಧಾರಣೆ ತಂದು, ಈ ಎಲ್ಲಾ ಯೋಜನೆಗಳನ್ನು ಮಾರುಕಟ್ಟೆಗೆ ಕೊಂಡೊಯ್ದರೆ ಸಮಾಜಕ್ಕೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದು ಎಲ್ಲರ ಆಶಯವೂ ಆಗಿದೆ. ಪರಿಸರವನ್ನು ಉಳಿಸುವುದು, ಅಸಹಾಯಕರಿಗೆ ಅನುಕೂಲವಾಗುವಂತಹ ಕೆಲವು ಮಾದರಿಗಳನ್ನು ವಿದ್ಯಾರ್ಥಿಗಳು ಆವಿಷ್ಕರಿಸಿರುವುದು ಖುಷಿ ತಂದಿದೆ. ಬಿಐಇಟಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಆಲೋಚನೆಯಿಂದ ರೂಪು ಪಡೆದ ಇಲ್ಲಿನ ಕೆಲವು ಮಾದರಿಗಳನ್ನು ನಮ್ಮ ಉದ್ಯಮದಲ್ಲೂ ಅಳವಡಿಸಿಕೊಳ್ಳಲು ಉದ್ದೇಶಿಸಿದ್ದೇನೆ ಎಂದು ಘೋಷಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲ್ಯಾಧಾರಿತ ಕಲಿಕೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಎನ್ವರ್ನಮೆಂಟ್ ಇಂಜಿನಿಯರಿಂಗ್‌ನಲ್ಲಿ ಕೆಮಿಕಲ್, ಸಿವಿಲ್, ಮೆಕ್ಯಾನಿಕಲ್ ಜೊತೆಗೆ ಕೃತಕ ಬುದ್ಧಿಮತ್ತೆ ಸಹ ಅಗತ್ಯ. ಈಗಿನ ದಿನಮಾನಗಳಲ್ಲಿ ತಾಂತ್ರಿಕತೆ ಬದಲಾದಂತೆಲ್ಲಾ ಅದಕ್ಕೆ ನಾವು ಹೊಂದಿಕೊಳ್ಳಬೇಕು. ಮೆಕ್ಯಾನಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್ ಎರಡೂ ವಿಭಾಗಕ್ಕೂ ಕಂಪ್ಯೂಟರ್ ಇಂಜಿನಿಯರಿಂಗ್ ಅಗತ್ಯವಾಗಿದೆ. ಹೀಗೆ ಒಂದಕ್ಕೊಂದು ಅವು ಬೆಸೆದುಕೊಂಡಿವೆ.

• **ಡಾ.ಎಚ್.ಬಿ.ಅರವಿಂದ್** ಬಾಪೂಜಿ ತಾಂತ್ರಿಕ ವಿದ್ಯಾಲಯ ಪ್ರಾಚಾರ್ಯ

ಕಾಲೇಜಿನ ಡಾ.ಶಂಕರಮೂರ್ತಿ ಮಾತನಾಡಿ, ಪ್ರದರ್ಶನದಲ್ಲಿ ಒಟ್ಟು 52 ಮಾದರಿಗಳನ್ನು ಪ್ರದರ್ಶಿಸಲಾಗಿದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳನ್ನು ಹೊರತರುವುದು ಇದರ ಉದ್ದೇಶವಾಗಿದೆ. ಉತ್ತಮ ಸಂಶೋಧನೆಗಳಿಗೆ ಪೇಟೆಂಟ್ ಪಡೆದು, ಕೈಗಾರಿಕೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು, ಸಮಾಜಕ್ಕೆ ಪೂರಕವಾಗುವಂತೆ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು.

ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಸೇರಿ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಇದ್ದರು.

ಮರಭೂಮಿ ಮಣ್ಣನ್ನು ಫಲವತ್ತಾಗಿಸುವ ವಿಧಾನ, ದೃಷ್ಟಿಹೀನರ ಓಡಾಟಕ್ಕೆ ಅನುಕೂಲವಾಗುವಂತಹ ಚಾರ್ಜೆಬಲ್ ಶೂಗಳು, ಕೋಳಿ ಮೊಟ್ಟೆಯ ಹೊರ ಭಾಗದ ಗಟ್ಟಿಯಾದ ಭಾಗ ಬಳಸಿ, ವಿಟಮಿನ್ ಮಾತ್ರೆ ತಯಾರಿಕೆ, ಸೆನ್ಸಾರ್ ಆಧಾರಿತ ಕೃಷಿ ಸಹಕಾರಿ ಬೋರ್ಡ್ ನಿರ್ಮಾಣ, ಹತ್ತು ಹಲವು ಮಾದರಿಗಳು, ಸಂಶೋಧನೆಗಳು ಪ್ರದರ್ಶನದಲ್ಲಿ ಗಮನ ಸೆಳೆದವು.

Vijayavani 30-05-2023

ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ 'ನಿರ್ಮಾಣ 3.0' | ಭವಿಷ್ಯದ ಇಂಜಿನಿಯರುಗಳ ಪ್ರತಿಭೆ ಪ್ರದರ್ಶನಕ್ಕೆ ವೇದಿಕೆ

# ತಾಂತ್ರಿಕ ಯೋಜನೆಗಳಲ್ಲಿ ಸಾಮಾಜಿಕ ಕಳಕಳಿ, ಸೃಜನಶೀಲತೆ ಅನಾವರಣ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಅವರೆಲ್ಲ ಭವಿಷ್ಯದ ಇಂಜಿನಿಯರುಗಳು. ಅಂತಿಮ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕಲಿಕೆಯ ಅನುಭವದಿಂದ ಸಿದ್ಧಪಡಿಸಿದ ಯೋಜನೆಗಳ ಪ್ರದರ್ಶನಕ್ಕೆ ಅಲ್ಲಿ ವೇದಿಕೆ ಒದಗಿಸಲಾಗಿತ್ತು.

ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ 'ನಿರ್ಮಾಣ 3.0' ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಪ್ರತಿಭೆಗೆ ಕನ್ನಡಿ ಹಿಡಿಯಿತು.

ರೈತರು ತಮ್ಮ ಬೆಳೆಗಳ ಸ್ಥಿತಿಗತಿ, ಹೊಲದ ತೇವಾಂಶ, ವಾತಾವರಣದ ಉಷ್ಣಾಂಶ, ನೀರಿನ ಅಗತ್ಯ ನಿರ್ವಹಿಸಲು ಲೋರಾ ತಂತ್ರಜ್ಞಾನ ಆಧಾರಿತ ಸಂವಹನವನ್ನು ವಿದ್ಯಾರ್ಥಿಗಳು ತಮ್ಮ ಯೋಜನೆಯಲ್ಲಿ ಬಳಸಿದ್ದಾರೆ. ಅವರಿಗೆ ಅಧ್ಯಾಪಕ ಡಾ.ಕೆ. ಗಣೇಶ್ ಮಾರ್ಗದರ್ಶನ ನೀಡಿದ್ದಾರೆ.

ಜಲಮೂಲಗಳಲ್ಲಿ ತೇಲುವ ಕಸವನ್ನು ಸಂಗ್ರಹಿಸಲು ಸೌರಶಕ್ತಿ ಚಾಲಿತ ತಂತ್ರಜ್ಞಾನವನ್ನು ವಿದ್ಯಾರ್ಥಿಗಳ ಮತ್ತೊಂದು ತಂಡ ಅಭಿವೃದ್ಧಿಪಡಿಸಿದೆ. ಕೆಲವು ವಿದ್ಯಾರ್ಥಿಗಳು ದಾವಣಗೆರೆ ನಗರದ ವಿವಿಧೆಡೆಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಗುಣಮಟ್ಟ ಪರೀಕ್ಷೆ ಮಾಡಿದ್ದಾರೆ.

ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸದಿರುವುದು, ತ್ರಿಬಲ್ ರೈಡಿಂಗ್ ಇನ್ನಿತರ ಉಲ್ಲಂಘನೆ ಮಾಡಿದರೆ ಅದನ್ನು ಪತ್ತೆಹಚ್ಚುವ ತಂತ್ರಜ್ಞಾನ, ಸ್ಮಾರ್ಟ್ ಹೆಲ್ಮೆಟ್ ಹೀಗೆ ಹಲವು ವಿಶೇಷ ಯೋಜನೆಗಳು ಪ್ರದರ್ಶನದಲ್ಲಿ ಗಮನ ಸೆಳೆದವು.

ಪ್ರದರ್ಶನವನ್ನು ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಹಿರಿಯ ವಿದ್ಯಾರ್ಥಿ ಹಾಗೂ ಶಿವಮೊಗ್ಗದ ಕೈಗಾರಿಕೋದ್ಯಮಿ ಡಿ.ಎಸ್. ಚಂದ್ರಶೇಖರ್ ಉದ್ಘಾಟಿಸಿದರು. ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಕಾರ್ಯಾಗಾರದ ಆಯೋಜಕ ಡಾ.ಎ.ಜಿ. ಶಂಕರಮೂರ್ತಿ ಇದ್ದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ 'ನಿರ್ಮಾಣ 3.0' ಯೋಜನೆಗಳ ಪ್ರದರ್ಶನವನ್ನು ಶಿವಮೊಗ್ಗದ ಕೈಗಾರಿಕೋದ್ಯಮಿ ಡಿ.ಎಸ್. ಚಂದ್ರಶೇಖರ್, ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೃಷಭೇಂದ್ರಪ್ಪ ವೀಕ್ಷಿಸಿದರು.

## ಅಂಧರು, ಕಿವುಡರಿಗಾಗಿ ಸ್ಮಾರ್ಟ್ ಶೂ

ಸಾಮಾನ್ಯವಾಗಿ ಅಂಧರು ವಾಕಿಂಗ್ ಸ್ಟಿಕ್ ಹಿಡಿದು ನಡೆದಾಡುವುದನ್ನು ನೋಡಿದ್ದೇವೆ. ಅವರ ಹೆಜ್ಜೆ ಹೆಜ್ಜೆಗೂ ಸೂಚನೆಗಳನ್ನು ನೀಡುವ ಸ್ಮಾರ್ಟ್ ಶೂಗಳನ್ನು ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ. ಅಂಧರು ನಡೆದುಕೊಂಡು ಹೋಗುವ ವೇಳೆ ಎದುರಾಗುವ ಅಡಚಣೆಗಳ ಬಗ್ಗೆ ಶೂಗಳಲ್ಲಿ ಅಳವಡಿಸಿದ ಸೆನ್ಸರ್‌ಗಳು ಸಂದೇಶವನ್ನು ರವಾನಿಸುತ್ತವೆ. ಇಯರ್ ಫೋನ್ ಮೂಲಕ ಅಂಧರು ಅದನ್ನು ಕೇಳಿಸಿಕೊಳ್ಳುತ್ತಾರೆ. ಕಿವುಡರಿಗೆ ವೈಬ್ರೇಟರ್ ನೆರವಿನಿಂದ ಸೂಚನೆಗಳನ್ನು ನೀಡುವ ತಂತ್ರಜ್ಞಾನ ಅದರಲ್ಲಿದೆ.



## ಎಗ್ ಶೆಲ್‌ಗಳ ಮರುಬಳಕೆ

ಬಳಸಿ ಬಿಸಾಡುವ ಮೊಟ್ಟೆಯ ಮೇಲ್ಪದರ (ಎಗ್ ಶೆಲ್)ವನ್ನು ಮರು ಬಳಕೆ ಮಾಡಿರುವ ವಿದ್ಯಾರ್ಥಿಗಳು ಅದನ್ನು ಕ್ಯಾಲ್ಸಿಯಂ ಪೋಷಕಾಂಶವಾಗಿ, ಸಸ್ಯಗಳಿಗೆ ರಸಗೊಬ್ಬರವಾಗಿ ಬಳಸಬಹುದು ಎಂಬುದನ್ನು ತಮ್ಮ ಯೋಜನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಮನೆ, ಹೋಟೆಲ್‌ಗಳಿಂದ ಸಂಗ್ರಹಿಸಿ ತಂದ ಎಗ್ ಶೆಲ್‌ಗಳನ್ನು ಪುಡಿ ಮಾಡಿ ಟೊಮ್ಯಾಟೊ ಸಸಿಗೆ ಗೊಬ್ಬರ ರೂಪದಲ್ಲಿ ನೀಡಿ ಅದರಿಂದ ಪ್ರಯೋಜನವಾಗಿದೆ ಎಂದು ನಿರೂಪಿಸಿದ್ದಾರೆ. ಅದೇ ಪುಡಿಯನ್ನು ಕ್ಯಾಲ್ಸಿಯಂ ಪೋಷಕಾಂಶವಾಗಿ ಟ್ಯಾಬ್ಲೆಟ್ ರೂಪ ನೀಡಿದ್ದಾರೆ.

# ಮಣ್ಣಿಗೆ ನ್ಯಾನೋ ಕ್ಲೇ, ಮೊಟ್ಟೆಯ ಕ್ಯಾಲ್ಸಿಯಂ ಗುಳಿಗೆ

Janathavani 30-05-2023

## ಬಿಐಇಟಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ 56 ಮಾದರಿಗಳ ಪ್ರದರ್ಶನ



ದಾವಣಗೆರೆ, ಮೇ 29 - ಮಣ್ಣಿನ ಫಲವತ್ತತೆ ಹೆಚ್ಚಿಸಲು ನ್ಯಾನೋ ಕ್ಲೇ ಬಳಕೆ, ಕೋಳಿ ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ, ಹೊಲಗಳ ಮೇಲೆ ಆಧುನಿಕ ನಿಗಾ... ಇವೆಲ್ಲ ಬಿ.ಐ.ಇ.ಟಿ. ಕಾಲೇಜಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳು ರೂಪಿಸಿರುವ ಪ್ರಾಯೋಗಿಕ ಮಾದರಿಗಳು.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ 'ನಿರ್ಮಾಣ 3.0' ಯೋಜನೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಹತ್ತು ಶಾಖೆಗಳ 56 ಮಾದರಿಗಳನ್ನು ಪ್ರದರ್ಶಿಸಲಾಗಿತ್ತು.

ಬರಡಾಗಿರುವ ಜಮೀನನ್ನು ಮತ್ತೆ ಫಲವತ್ತಾಗಿ ಮಾಡುವ ದ್ರವರೂಪದ ನ್ಯಾನೋ ಕ್ಲೇ ರೂಪಿಸಿದ್ದೇವೆ. ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ ಹಾಗೂ ಇಳುವರಿಯೂ ಹೆಚ್ಚಾಗುತ್ತದೆ ಎಂದು ಬಿಐಇಟಿ ಕಾಲೇಜಿನ ಉಪನ್ಯಾಸಕ ಹಾಗೂ ಯೋಜನೆಯ ಮಾರ್ಗದರ್ಶಕ ಡಾ. ಎ. ಎಸ್. ಶರಣ್ ತಿಳಿಸಿದ್ದಾರೆ.

ನಗರದ ರಂಗನಾಥ ಬಡಾವಣೆಯಲ್ಲಿನ ಮಣ್ಣಿನಲ್ಲಿ ನ್ಯಾನೋ ಕ್ಲೇಗೆ ಅಗತ್ಯವಾದ ಗುಣ ಇದ್ದದ್ದು ಕಂಡು ಬಂದಿತ್ತು. ಅದನ್ನು ಬಳಸಿಕೊಂಡಿದ್ದೇವೆ. ಮಣ್ಣಿನಿಂದಲೇ ಲಭ್ಯವಾಗುವ ಈ ನ್ಯಾನೋ ಕ್ಲೇ ಗೊಬ್ಬರ ಬಳಸುವುದರಿಂದ ಬರಡು ಭೂಮಿಯೂ (4ನೇ ಪುಟಕ್ಕೆ)

Janathavani 30-05-2023

# ಮಣ್ಣಿಗೆ ನ್ಯಾನೋ ಕ್ಲೇ, ಮೊಟ್ಟೆಯ ಕ್ಯಾಲ್ಸಿಯಂ ಗುಳಿಗೆ

(1ನೇ ಪುಟದಿಂದ) ಫಲವತ್ತಾಗುತ್ತದೆ ಎಂದವರು ಹೇಳಿದ್ದಾರೆ. ಡಾ. ಜಿ. ಮಾನವೇಂದ್ರ ಅವರು ಯೋಜನೆಯ ಇನ್ನೊಬ್ಬ ಮಾರ್ಗದರ್ಶಕರಾಗಿದ್ದು, ವಿದ್ಯಾರ್ಥಿಗಳಾದ ವಿಜಯ್ ಕಟ್ಟಿ, ಎಸ್. ಧನುಶ್, ಕೆ.ಜಿ. ಪೃಥ್ವಿ ಹಾಗೂ ಎಂ. ಸುಮೇಧ್ ಅವರು ಯೋಜನೆಯಲ್ಲಿ ಭಾಗಿಯಾಗಿದ್ದಾರೆ.

ಡಾ. ಡಿ.ಜಿ. ಪ್ರವೀಣ್ ಅವರ ಮಾರ್ಗದರ್ಶನದಲ್ಲಿ ಬಿ. ಕಾವ್ಯ, ಕೆ.ಎಂ. ಶೃತಿ, ಶುಭಂ, ಬಿಂದು, ನಯನ, ಪವಿತ್ರ ಹಾಗೂ ಪೂಜಾ ಅವರು ಬ್ಯಾಡಗಿ ಮೆಣಸಿನಕಾಯಿಯಿಂದ ಸೂಪರ್ ಕ್ರಿಟಿಕಲ್ ಫ್ಲುಯಿಡ್ ರೂಪಿಸುವ ವಿಧಾನವನ್ನು ಪ್ರದರ್ಶಿಸಿದ್ದರು. ಈಗಾಗಲೇ ಮೆಣಸಿನ ಸಾರವನ್ನು ಹೊರ ತೆಗೆಯುವ ಹಲವು ವಿಧಗಳಿವೆ. ಗಾಢ ದ್ರವದ ರೂಪದಲ್ಲಿ ಸಾರವನ್ನು ತೆಗೆಯುವುದು ಕಡಿಮೆ ವೆಚ್ಚದ್ದು ಹಾಗೂ ಹೆಚ್ಚು ಉಪಯುಕ್ತ ಎಂದವರು ಪ್ರತಿಪಾದಿಸಿದ್ದಾರೆ.

ಕೆ.ಜೆ. ಶಶಿಕಲಾ ಅವರ ನೇತೃತ್ವದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆಗಳನ್ನು ಕಡಿಮೆ ವೆಚ್ಚದಲ್ಲಿ ರೂಪಿಸಬಹುದು ಎಂಬ ಪ್ರಾತ್ಯಕ್ಷಿಕೆ ರೂಪಿಸಿದ್ದಾರೆ. ಇದರಿಂದ ಮೊಟ್ಟೆ ತ್ಯಾಜ್ಯದ ನಿವಾರಣೆಯಾಗುವ ಜೊತೆಗೆ ಪೌಷ್ಠಿಕಾಂಶದ ಮರು ಬಳಕೆಯಾಗುತ್ತದೆ. ಇದು ಕಡಿಮೆ ವೆಚ್ಚದ್ದು ಎಂದವರು ಹೇಳಿದ್ದಾರೆ.

ಪ್ರಸಕ್ತ ಮೊಟ್ಟೆಯ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ ಮಾಡುವ ಪದ್ಧತಿ ಪ್ರಚಲಿತವಾಗಿಲ್ಲ. ಅತಿ ಕಡಿಮೆ ದರದಲ್ಲಿ ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ ತಯಾರಿಸಬಹುದು ಎಂದು ವಿದ್ಯಾರ್ಥಿಗಳಾದ ಬಿ.ಕೆ. ಪ್ರಜ್ವಲ್, ಪ್ರಜ್ವಲ್ ಪಾಟೀಲ್, ಅಮೃತ ವರ್ಷಿಣಿ, ಕೀರ್ತನ ತಿಳಿಸಿದ್ದಾರೆ.

ಡಾ. ಕೆ. ಗಣೇಶ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ನವೀನ್ ಕಲಾಲ್, ನವೀನ್ ರಾವಲ್, ಮಂಜುನಾಥ್ ಹಾಗೂ ಹಂಸವೇಣಿ ಅವರು ಹೊಲಗಳ ಮಾಹಿತಿ ಪಡೆಯುವ ಯಂತ್ರವನ್ನು ರೂಪಿಸಿದ್ದಾರೆ. ಮೊಬೈಲ್ ಇಲ್ಲವೇ ಇಂಟರ್‌ನೆಟ್ ಇಲ್ಲದೆಯೇ ಲೋರಾ ಎಂಬ ತಂತ್ರಜ್ಞಾನ ಆಧರಿತ ಸಂವಹನ ಯಂತ್ರ ರೂಪಿಸಿರುವುದಾಗಿ ಇವರು ತಿಳಿಸಿದ್ದಾರೆ.

ಐದು ಕಿಲೋಮೀಟರ್ ದೂರದಲ್ಲಿದ್ದರೂ ರೈತರಿಗೆ ಬೆಳೆಗಳ ಸ್ಥಿತಿಗತಿ, ತೇವಾಂಶ, ಉಷ್ಣಾಂಶ, ನೀರಿನ ಅಗತ್ಯ ಮುಂತಾದ ಮಾಹಿತಿ ಸಿಗುತ್ತದೆ. 4 ಸಾವಿರ ರೂ. ವೆಚ್ಚದಲ್ಲಿ ಮಾದರಿ ಉಪಕರಣ ರೂಪಿಸಿರುವುದಾಗಿ ಅವರು ಹೇಳಿದ್ದಾರೆ.

ಕಿತ್ತಳೆ ಸಿಪ್ಪೆಯಿಂದ ಪೆಕ್ಟಿನ್ ಉತ್ಪಾದನೆ, ಹಣ್ಣು ಮಾಗಿರುವುದನ್ನು ಪತ್ತೆ ಮಾಡುವ ಉಪಕರಣ, ಆರೋಗ್ಯ ಸೇವೆಗಳ ದಾಖಲೆಗಳ ನಿರ್ವಹಣೆಗೆ ಬ್ಲಾಕ್‌ಚೈನ್ ಬಳಕೆ, ಜಾನುವಾರುಗಳ ಪತ್ತೆ ಉಪಕರಣ... ಹೀಗೆ ಹತ್ತು ಹಲವು ವಲಯಗಳಿಗೆ ನೆರವಾಗುವ ಪ್ರಾತ್ಯಕ್ಷಿಕೆಗಳನ್ನು ಇಂಜಿನಿಯರಿಂಗ್ ವಿದ್ಯಾರ್ಥಿಗಳು ರೂಪಿಸಿದ್ದರು.

## ಪ್ರಾತ್ಯಕ್ಷಿಕೆಗಳು ಉತ್ಪನ್ನಗಳಾಗಲಿ...

ವಿದ್ಯಾರ್ಥಿಗಳು ಉತ್ತಮ ಪ್ರಾತ್ಯಕ್ಷಿಕೆಗಳನ್ನು ರೂಪಿಸಿದ್ದಾರೆ. ಇವುಗಳು ಉತ್ಪನ್ನಗಳಾಗಿ ಮಾರುಕಟ್ಟೆಗೆ ಬರಬೇಕಿದೆ ಎಂದು ಉದ್ಯಮಿ ಹಾಗೂ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಫೌಂಡ್ರಿಮೆನ್ ಉಪಾಧ್ಯಕ್ಷ ಡಿ.ಎಸ್. ಚಂದ್ರಶೇಖರ್ ತಿಳಿಸಿದರು.

ನಿರ್ಮಾಣ - 3.0 ಉದ್ಘಾಟಿಸಿ ಮಾತನಾಡಿದ ಅವರು, ಬದಲಾದ ಕಾಲಮಾನಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆ ರೂಪಿಸಿದ್ದಾರೆ. ರೈತರಿಗೆ ಅನುಕೂಲವಾಗುವ ಡಿಜಿಟಲ್ ಪರಿಹಾರಗಳನ್ನು ರೂಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಸಂಶೋಧನೆಗಳಿಗಾಗಿ ಹಲವು ಇಂಜಿನಿಯರಿಂಗ್ ವಿಭಾಗಗಳ ಸಹಭಾಗಿತ್ವ ಅಗತ್ಯವಾಗಿದೆ. ಹೀಗಾಗಿ ಜಂಟಿ ಸಹಭಾಗಿತ್ವಕ್ಕೆ ಒತ್ತು ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದ ಸಂಚಾಲಕ ಎ.ಜಿ. ಶಂಕರ ಮೂರ್ತಿ ಮಾತನಾಡಿ, ಅನ್ವೇಷಣೆಗಳಿಗೆ ಉತ್ತೇಜನ ನೀಡಲು ಮೂರನೇ ವರ್ಷ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಗುತ್ತಿದೆ. ಉತ್ತಮ ಪ್ರಾತ್ಯಕ್ಷಿಕೆಗಳಿಗೆ ಪೇಟೆಂಟ್ ಪಡೆಯುವ ಪ್ರಯತ್ನ ನಡೆಸಲಾಗುವುದು ಎಂದರು.

# ಸಮಾಜಕ್ಕೆ ಉಪಯುಕ್ತವಾಗುವ ಆವಿಷ್ಕಾರಕ್ಕೆ ಮುಂದಾಗಿ

Udayavani 30-05-2023

## ಬಿಐಇಟಿಯಲ್ಲಿ ನಿರ್ಮಾಣ್ 3.0 ವಸ್ತು ಪ್ರದರ್ಶನ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಡಿ.ಎಸ್. ಚಂದ್ರಶೇಖರ್ ಕರೆ

**ದಾವಣಗೆರೆ:** ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಮಾಜಕ್ಕೆ ಅತ್ಯುಪಯುಕ್ತ ಯೋಜನೆ ಕಾರ್ಯಕ್ರಮಗಳ ಸಂಶೋಧನೆ, ಆವಿಷ್ಕಾರಕ್ಕೆ ಮುಂದಾಗಬೇಕು ಎಂದು ಕೊಲ್ಹಾರದ ಇನ್ಸ್ಟಿಟ್ಯೂಟ್ ಇಂಡಿಯನ್ ಫೌಂಡ್ರಿಮೆನ್ ಸಂಸ್ಥೆ ಉಪಾಧ್ಯಕ್ಷ, ಬಿಐಇಟಿಯ ಹಳೆ ವಿದ್ಯಾರ್ಥಿ ಡಿ.ಎಸ್. ಚಂದ್ರಶೇಖರ್ ಹೇಳಿದರು.

ಸೋಮವಾರ ಬಿಐಇಟಿಯಲ್ಲಿ ಹಮ್ಮಿಕೊಂಡಿದ್ದ ನಿರ್ಮಾಣ್ 3.0 ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ದಶಕಗಳ ಹಾಗೂ ಈಗಿನ ಪ್ರಾಜೆಕ್ಟ್‌ಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಪ್ರದರ್ಶನದಲ್ಲಿ ಹೆಚ್ಚಾಗಿ ರೈತರಿಗೆ ಅನುಕೂಲವಾಗುವ ಪ್ರಾಜೆಕ್ಟ್‌ಗಳಿರುವುದು ಗಮನಾರ್ಹ ಎಂದು ಸಂತಸ ವ್ಯಕ್ತಪಡಿಸಿದರು.

ಇಂಜಿನಿಯರಿಂಗ್ ವಿದ್ಯಾರ್ಥಿ ಸಮುದಾಯ ಡಿಜಿಟಲೈಸೇಷನ್ ಮೂಲಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಪ್ರದರ್ಶನದಲ್ಲಿನ ಯೋಜನೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಸಮಾಜಕ್ಕೆ ಅನುಕೂಲ ಮಾಡುವುದು ಎಲ್ಲರ ಆಶಯವಾಗಿದೆ.

ಪರಿಸರ ಉಳಿಸುವುದು, ಅಸಹಾಯಕರಿಗೆ ಅನುಕೂಲವಾಗುವ ಕೆಲವು ಪ್ರಾಜೆಕ್ಟ್‌ಗಳನ್ನು ಸಿದ್ಧಪಡಿಸಿರುವುದು ಸಂತೋಷದ ಸಂಗತಿ. ಇವುಗಳಲ್ಲಿ ಕೆಲವನ್ನು ನಮ್ಮ ಉದ್ಯಮದಲ್ಲಿ ಅಳವಡಿಸಿಕೊಳ್ಳುವ ಚಿಂತನೆ ಮಾಡಿರುವುದಾಗಿ ತಿಳಿಸಿದರು.

ಬಿಐಇಟಿ ಪ್ರಾಚಾರ್ಯ ಡಾ| ಎಚ್.ಬಿ. ಅರವಿಂದ್ ಮಾತನಾಡಿ, ತಾಂತ್ರಿಕತೆ ಬದಲಾವಣೆಗೆ ಅನುಗುಣವಾಗಿ ಕಲಿಕೆ ಮತ್ತು ಉಪಯೋಗದ ಕಡೆಗೆ ಹೆಚ್ಚು ಗಮನಹರಿಸುವುದು ಅಗತ್ಯ. ನಿರ್ಮಾಣ್ 3.0 ಪ್ರದರ್ಶನದಲ್ಲಿ ಸಿವಿಲ್, ಕಂಪ್ಯೂಟರ್, ಬಯೋಟೆಕ್ನಾಲಜಿ ಹೀಗೆ ಎಲ್ಲ ವಿಭಾಗಗಳು ಒಂದಕ್ಕೊಂದು ಸೇರಿಸಿಕೊಂಡು ಇಡೀ ತಾಂತ್ರಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ನಮ್ಮ ಆದ್ಯತೆ. ಪ್ರತಿವರ್ಷ ಪ್ರದರ್ಶನ ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ಕಾಲೇಜಿನ ವಿದ್ಯಾರ್ಥಿಗಳು 52 ವಿಶೇಷ ಪ್ರಾಜೆಕ್ಟ್ ಸಿದ್ಧಪಡಿಸಿದ್ದು ಒಂದಕ್ಕಿಂತ ಒಂದು ಭಿನ್ನವಾಗಿವೆ ಎಂದು ಸಂತಸ ವ್ಯಕ್ತಪಡಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡಲಾಗಿದೆ. ಪರಿಸರ, ಸಿವಿಲ್, ಕೆಮಿಕಲ್, ಮೆಕ್ಯಾನಿಕಲ್ ಜೊತೆಗೆ ಕೃತಕ ಬುದ್ಧಿಮತ್ತೆ ಕೂಡ ಅಗತ್ಯವಾಗಿದೆ. ತಾಂತ್ರಿಕತೆ ಬದಲಾದಂತೆ ಅದಕ್ಕೆ ಹೊಂದಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡಾ|ಎ.ಜಿ. ಶಂಕರಮೂರ್ತಿ ಮಾತನಾಡಿ, ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಹೊರ ತರುವ ಉದ್ದೇಶದಿಂದ ವಸ್ತು ಪ್ರದರ್ಶನ ನಡೆಸಲಾಗುತ್ತಿದೆ. ಉತ್ತಮ ಸಂಶೋಧನೆಗಳಿಗೆ ಪೇಟೆಂಟ್ ಪಡೆದು ಕೈಗಾರಿಕೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಸಮಾಜಕ್ಕೆ ಪೂರಕವಾಗುವಂತೆ ಮಾಡಲಾಗುವುದು ಎಂದು ತಿಳಿಸಿದರು.

ಕಾಲೇಜಿನ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ, ವಿವಿಧ ವಿಭಾಗದ ಡೀನ್, ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು ಭಾಗವಹಿಸಿದ್ದರು.



ದಾವಣಗೆರೆ: ಬಿಐಇಟಿಯಲ್ಲಿ ನಡೆದ ಯೋಜನಾ ವಸ್ತುಪ್ರದರ್ಶನ ನಿರ್ಮಾಣ 3.0 ನೋಟ.

### ವಿದ್ಯಾರ್ಥಿಗಳ ಸಂಶೋಧನೆ- ಬೌದ್ಧಿಕ ಶಕ್ತಿ ಅನಾವರಣ

**ದಾವಣಗೆರೆ:** ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಮತ್ತು ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ, ಭಾರತೀಯ ಇಂಜಿನಿಯರ್ಸ್ ಸಂಸ್ಥೆ ನಾವೀನ್ಯತೆ ಕೋಶ ಸಹಯೋಗದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಸೋಮವಾರ ಏರ್ಪಡಿಸಿದ್ದ 2022-23 ನೇ ಸಾಲಿನ ಅಂತಿಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಯೋಜನಾ ಮತ್ತು ಪ್ರದರ್ಶನ ನಿರ್ಮಾಣ 3.0 ಕಾರ್ಯಾಗಾರ ವಿದ್ಯಾರ್ಥಿ ಸಮೂಹದ ನಾವಿನ್ಯ ತಂತ್ರಜ್ಞಾನ, ಬೌದ್ಧಿಕ ಶಕ್ತಿಗೆ ಸಾಕ್ಷಿಯಾಯಿತು.

ಕಾಲೇಜಿನ ವಿವಿಧ ವಿಭಾಗಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ಕೈಗೊಂಡಿರುವ ನವೀನ, ಸಾಮಾಜಿಕ ಪ್ರಾಮುಖ್ಯತೆ ಯುಳ್ಳ ಹಾಗೂ ಕೈಗಾರಿಕಾ ವಲಯದ ಬೇಡಿಕೆ, ಅಪೇಕ್ಷೆಗೆ ಅನುಗುಣವಾದ ಸಂಶೋಧನೆಗಳ ಪ್ರದರ್ಶನ ಮತ್ತು ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಮತ್ತು ಉತ್ತೇಜನ ನೀಡುವ ಉದ್ದೇಶದ ವಸ್ತು ಪ್ರದರ್ಶನ ಗಮನಾರ್ಹವಾಗಿತ್ತು.

10 ತಾಂತ್ರಿಕ ವಿಭಾಗದ 150 ವಿದ್ಯಾರ್ಥಿಗಳು ಮಾರ್ಗದರ್ಶಕರ ನೆರವು ಮತ್ತು ಸಲಹೆಗಳೊಂದಿಗೆ ಸಂಶೋಧಿಸಿ ಅಭಿವೃದ್ಧಿಪಡಿಸಿದ ಸೌರ ವಿದ್ಯುತ್ ಉಪಯೋಗ, ಗ್ರಾಫೀನ್‌ಗಳ ಉಪಯುಕ್ತತೆ, ಕಾರ್ಬನ್ ಕಂಡೀಷನಿಂಗ್ ಮೇಲೆ ಸಿಮೆಂಟ್ ನವೀಕರಣ, ಬಹುಪಯೋಗಿ ವ್ಯವಸಾಯ ಉಪಕರಣ, ಸಂಚಾರ ಉಲ್ಲಂಘನೆ ನಿಯಂತ್ರಣ ಸಾಧನ, ನ್ಯಾನೋ ಸೆಲ್ಯುಲೋಸ್ ಸಂಸ್ಕರಣೆ, ಆಲ್ಕೋಹಾಲ್ ಸೂಚಿತ ಸ್ವಯಂ ಚಾಲಿತ ವಾಹನ ನಿಯಂತ್ರಣ, ಕುರುಡರಿಗೆ ಮತ್ತು ಕಿವುಡರಿಗೆ ಆಧಾರಿತ ತಂತ್ರಜ್ಞಾನ ಬಳಸಿ ತಯಾರಿಸಿದ ಸ್ವಯಂ ಚಾರ್ಜ್ ಆಗುವ ಷೂಗಳು, ತಂತ್ರಜ್ಞಾನದಿಂದ ಪ್ರಾಣಿಗಳ ಪತ್ತೆಹಚ್ಚುವಿಕೆ, ಸಾಮಾಜಿಕ ಜಾಲತಾಣದಲ್ಲಿ ಅಂತರ್ಜಾಲ ಕಳ್ಳರ ಗುರುತಿಸುವಿಕೆ, ದ್ರವರೂಪದ ನ್ಯಾನೋ ಕ್ಲೇ ಬಳಸಿ ಮಣ್ಣಿನ ಫಲವತ್ತತೆ ಹೆಚ್ಚಿಸುವಿಕೆ ಇವೆಲ್ಲ ವಿದ್ಯಾರ್ಥಿಗಳಲ್ಲಿನ ಅಗಾಧ ತಾಂತ್ರಿಕತೆ ಶಕ್ತಿಯ ಪ್ರತೀಕವಾಗಿದ್ದವು. ವಸ್ತು ಯೋಜನೆಗಳನ್ನು ಗುಣಮಟ್ಟ ಮತ್ತು ತಂತ್ರಜ್ಞಾನ ಸಾಮ್ಯತೆ ಆಧರಿಸಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ವಿವಿಧ ನುರಿತ ವಿಷಯ ತಜ್ಞರು ವಸ್ತು ಯೋಜನೆಗಳನ್ನು ಅವಲೋಕಿಸಿ, ವಿಶ್ಲೇಷಿಸಿ ಹೊಸತನವನ್ನು ಒಳಗೊಂಡಿರುವ, ಸಾಮಾಜಿಕ ಜಾಗೃತಿ ಮೂಡಿಸುವ ಮತ್ತು ಆಯಾ ವಿಭಾಗದಲ್ಲಿ ಅತ್ಯುತ್ತಮವಾಗಿರುವುದಕ್ಕೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಯಿತು.

ಸುಮಾರು 50 ವಸ್ತು ಯೋಜನೆಗಳನ್ನು ಪ್ರದರ್ಶನಕ್ಕೆ ಅನುಮೋದಿಸಿದ್ದವುಗಳಲ್ಲಿ 11 ವಸ್ತು ಯೋಜನೆಗಳಿಗೆ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಹಣಕಾಸಿನ ನೆರವು ದೊರಕಿದೆ. ಉಳಿದ ವಸ್ತು ಯೋಜನೆಗಳಿಗೆ ಕಾಲೇಜಿನ ಹಣಕಾಸಿನ ನೆರವು ನೀಡಲಾಗಿತ್ತು.

- **ಯೋಜನಾ ವಸ್ತು ಪ್ರದರ್ಶನ ನಿರ್ಮಾಣ ಕಾರ್ಯಾಗಾರ**
- **10 ತಾಂತ್ರಿಕ ವಿಭಾಗದ 150 ವಿದ್ಯಾರ್ಥಿಗಳಿಂದ ನೂತನ ಆವಿಷ್ಕಾರದ ಮಾಡೆಲ್ ಪ್ರದರ್ಶನ**

30-05-2023

ಸಂಯುಕ್ತ ಕರ್ನಾಟಕ

## ಬಿಐಇಟಿಯಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳ ವಸ್ತು ಪ್ರದರ್ಶನ

# ಸಾಮಾಜಿಕ ಪ್ರಾಮುಖ್ಯತೆ



ದಾವಣಗೆರೆ: ಸಾಮಾಜಿಕ ಜಾಲತಾಣದಲ್ಲಿ ಅಂತರ್ಜಾಲ ಕಳ್ಳರ ಗುರುತಿಸುವಿಕೆ, ದ್ರವರೂಪದ ನ್ಯಾನೋ ಕ್ಲೇ ಬಳಸಿ ಮಣ್ಣಿನ ಫಲವತ್ತತೆ ಹೆಚ್ಚಿಸುವಿಕೆ, ಕುರುಡರಿಗೆ ಮತ್ತು ಕಿವುಡರಿಗೆ ತಂತ್ರಜ್ಞಾನ ಬಳಸಿ ತಯಾರಿಸಿದ ಸ್ವಯಂ ಚಾರ್ಜ್ ಆಗುವ ಶೂಗಳು ಸೇರಿದಂತೆ ಅನೇಕ ಸಂಶೋಧನ ವಸ್ತು ಪ್ರದರ್ಶನ ಬಿಐಇಟಿ ಕಾಲೇಜಿನ ಅಂತಿಮ ವರ್ಷದ ಬಿಇ ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟವು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಮತ್ತು ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ, ನವದೆಹಲಿ ಮತ್ತು ಭಾರತೀಯ ಎಂಜಿನಿಯರ್ಸ್ ಸಂಸ್ಥೆ ಕೊಲ್ಕೊತ್ತಾ ಹಾಗೂ ಕಾಲೇಜಿನ ಮಹಾವಿದ್ಯಾಲಯದ ನಾವಿನ್ಯತೆ ಕೋಶ ಸಹಯೋಗದಲ್ಲಿ ಬಿಐಇಟಿ ಕಾಲೇಜಿನ ಎಸ್. ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಸೋಮವಾರ ಪ್ರಸಕ್ತ ಸಾಲಿನ ಯೋಜನಾ ವಸ್ತು ಪ್ರದರ್ಶನ- ನಿರ್ಮಾಣ 3.0 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಿವುಡ ಮತ್ತು ಅಂಧರಿಗೆ ತಂತ್ರಜ್ಞಾನ ಅಳವಡಿಸಿ ತಯಾರಿಸಿದ ಶೂಗಳು ಮೆಟ್ಟಿಲು, ರಸ್ತೆಯ ತಗ್ಗು ಗುಂಡಿಗಳ ಇರುವಿಕೆಯನ್ನು ಸೂಕ್ಷ್ಮವಾಗಿ ತಿಳಿಸುವುದರಿಂದ ಆಗುವ ಅಪಘಾತಗಳನ್ನು ತಪ್ಪಿಸುವ ತಂತ್ರಜ್ಞಾನ ಅಂಧರು, ಕಿವುಡರಿಗೆ ಉಪಯುಕ್ತವಾಗಿರುವಂತೆ ಕಂಡುಬಂತು. ಸೌರ ವಿದ್ಯುತ್ ಉಪಯೋಗ, ಗ್ರಾಫೀನಗಳ ಉಪಯುಕ್ತತೆ, ಕಾರ್ಬನ್ ಕಂಡೀಷನಿಂಗ್ ಮೇಲೆ ಸಿಮೆಂಟ್‌ನ ನವೀಕರಣ, ಬಹುಪಯೋಗಿ ವ್ಯವಸಾಯ ಉಪಕರಣ, ಸಂಚಾರ ಉಲ್ಲಂಘನೆ ನಿಯಂತ್ರಣ ಸಾಧನ, ನ್ಯಾನೋ ಸೆಲ್ಯುಲೋಶನ್ ಸಂಸ್ಕರಣೆ, ಆಲ್ಕೋಹಾಲ್ ಸೂಚಿತ ಸ್ವಯಂ ಚಾಲಿತ ವಾಹನ ನಿಯಂತ್ರಣ ಸೇರಿದಂತೆ ವಿವಿಧ ತಂತ್ರಜ್ಞಾನ ಅಳವಡಿಕೆಯ ವಸ್ತು ಪ್ರದರ್ಶನ ನಡೆದವು.

ಕಾಲೇಜಿನ ಪ್ರಾಂಶುಪಾಲ ಡಾ. ಅರವಿಂದ್ ಮಾತನಾಡಿ, ಯೋಜನಾ ವಸ್ತು ಪ್ರದರ್ಶನವನ್ನು ಆಯೋಜಿಸಿರುವ ಮುಖ್ಯ ಉದ್ದೇಶ ನಮ್ಮ ಕಾಲೇಜಿನ ವಿವಿಧ ವಿಭಾಗಗಳ ಅಂತಿಮ ವರ್ಷದ ಬಿ.ಇ ವಿದ್ಯಾರ್ಥಿಗಳು ಕೈಗೊಂಡಿರುವ ನವೀನ, ಸಾಮಾಜಿಕ ಪ್ರಾಮುಖ್ಯತೆಯುಳ್ಳ ಹಾಗೂ ಕೈಗಾರಿಕೆಗನುಗುಣವಾಗಿ ಸಂಶೋಧನೆಗಳನ್ನು ಪ್ರದರ್ಶಿಸಲು ವೇದಿಕೆ ನಿರ್ಮಿಸಿ ಮತ್ತು ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಮತ್ತು ಅವರಿಗೆ ಉತ್ತೇಜನ ನೀಡುವುದಾಗಿದೆ ಎಂದು ತಿಳಿಸಿದರು.

ವಸ್ತು ಪ್ರದರ್ಶನದಲ್ಲಿ ಸುಮಾರು 10 ತಾಂತ್ರಿಕ ವಿಭಾಗದ 150 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕರ ನೆರವು ಮತ್ತು ಸಲಹೆಗಳೊಂದಿಗೆ ಸಂಶೋಧಿಸಿ ಅಭಿವೃದ್ಧಿಪಡಿಸಿದ ಯೋಜನೆಗಳನ್ನು ಪ್ರಸ್ತುತ ಪಡಿಸಿದರು. ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಶಿವಮೊಗ್ಗದ ಕೈಗಾರಿಕೋದ್ಯಮಿ ಡಿ.ಎಸ್.ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಿದರು. ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ನಿಕಾಯರಾದ ಡಾ ಎ.ಜಿ.ಶಂಕರಮೂರ್ತಿ ಉಪಸ್ಥಿತರಿದ್ದರು.